ಓ.ಎಸ್ ನಂ. 7/2022

**ಪಿ.ಡಬ್ಲ್ಯೂಃ**

**ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 11-06-2024 ರಂದು ಬೊಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಜಿ ಎಸ್ ಹೆಚ್ ನ್ಯಾಯವಾದಿರವರಿಂದಃ**

ನಿಪಿ-20 ನ್ನು ಎ.ಆರ್.ನಾಯ್ಕ ವಕೀಲರು ಬರೆದಿರುತ್ತಾರೆ. ನಿಪಿ-20 ನ್ನು ಬರೆಯುವ ಸಮಯದಲ್ಲಿ ನನ್ನೊಂದಿಗೆ ನನ್ನ ತಾಯಿ ದುರ್ಗಿ ಮುತ್ತಾ ನಾಯ್ಕ, ಹೊನ್ನಾ ಮುತ್ತಾ ನಾಯ್ಕ, ರಾಮಾ ಮುತ್ತಾ ನಾಯ್ಕ, ಲಕ್ಷ್ಮೀ ನಾರಾಯಣ ನಾಯ್ಕ, ಸೀತೆ ನಾರಾಯಣ ನಾಯ್ಕ, ಸರಸ್ವತಿ ಕನ್ನಾ ನಾಯ್ಕ ಅವರುಗಳು ಹಾಜರು ಇದ್ದರು. ಸಾಕ್ಷಿಯು ನಿಪಿ-20 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-20(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-20 ರಲ್ಲಿರುವ ಹೊನ್ನಾ ಮುತ್ತಾ ನಾಯ್ಕ, ಲಕ್ಷ್ಮೀ ನಾರಾಯಣ ನಾಯ್ಕ, ಸೀತೆ ನಾರಾಯಣ ನಾಯ್ಕ, ಸರಸ್ವತಿ ಕನ್ನಾ ನಾಯ್ಕ ಅವರುಗಳ ಸಹಿಗಳನ್ನು ನೋಡಿ ಗುರುತಿಸಿದ್ದು, ಸದ್ರಿ ಸಹಿಗಳನ್ನು ನಿಪಿ-20 (ಬಿ) ರಿಂದ (ಇ) ಎಂದು ಗುರುತಿಸಲಾಯಿತು. ನಿಪಿ-20 ಬರೆಯುವಾಗ ಪಂಚರಾದ ಮಂಜುನಾಥ ದ್ಯಾವಾ ನಾಯ್ಕ, ಸೀತಾರಾಮ ದ್ಯಾವಾ ನಾಯ್ಕ, ರಾಮಚಂದ್ರ ರಾಮಾ ನಾಯ್ಕ ಹಾಗೂ ವಕೀಲರಾದ ಅಶೋಕ್ ನಾಯ್ಕ ಅವರುಗಳು ಇದ್ದರು. ಸಾಕ್ಷಿಯು ನಿಪಿ-20 ರಲ್ಲಿರುವ ಮಂಜುನಾಥ ದ್ಯಾವಾ ನಾಯ್ಕ, ಸೀತಾರಾಮ ದ್ಯಾವಾ ನಾಯ್ಕ ರಾಮಚಂದ್ರ ರಾಮಾ ನಾಯ್ಕ ಹಾಗೂ ವಕೀಲರಾದ ಅಶೋಕ್ ನಾಯ್ಕ ಅವರುಗಳು ಅವರವರ ಹೆಸರುಗಳ ಮೇಲೆ ಸಹಿ ಮಾಡಿರುತ್ತಾರೆ ಎಂದು ನುಡಿದು, ಅವರುಗಳ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ-20 ಎಫ್, ಜಿ, ಹೆಚ್, ಮತ್ತು ಜೆ ಎಂದು ಗುರುತಿಸಲಾಯಿತು.

ಓ.ಎಸ್ ನಂ. 7/2022

**ಪಿ.ಡಬ್ಲ್ಯೂಃ**

ಈ ಹಂತದಲ್ಲಿ ಪ್ರತಿವಾದಿ ಪರ ನ್ಯಾಯಾವಾದಿರವರು ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

**(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ,**

ಸಿವಿಲ್ ನ್ಯಾಯಾಧೀಶರು ಸಿದ್ದಾಪುರ